4 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ

ಬೆಂಗಳೂರು

ಸಿಸಿ ನಂ. 21885/2011 ಪ್ರಾಸಾ ಃ 1

ಸಾಕ್ಷಿದಾರರ ಹೆಸರುಃ ಜಮೀರ್ ಹುಸೇನ್

ತಂದೆಯ ಹೆಸರು ಃ ಲೇಟ್ ಎಂ.ಎನ್ ಹುಸೇನ್

ವಯಸ್ಸು ಃ 64 ವರ್ಷ

ಕೆಲಸ ಃ ನಿವೃತ್ತ ಪಿ.ಎಸ್.ಐ

ವಾಸ ಃ ಬೆಂಗಳೂರು

ಸಾಕ್ಷಿಯನ್ನು ದಿಃ 27.12.2021 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಕಲಂ 299 ದಂ.ಪ್ರ.ಸಂ. ರಡಿಯಲ್ಲಿ ಸಾಕ್ಷಿ

ಮುಖ್ಯವಿಚಾರಣೆ ಃ ಹಿ.ಸಾ.ಸ.ಅ ರವರಿಂದಃ

1. ನಾನು ಮಡಿವಾಳ ಪೊಲೀಸ್ ಠಾಣೆಯಲ್ಲಿ 2012 ರಿಂದ 2016 ರವರೆಗೆ ಎ.ಎಸ್.ಐ ಎಂದು ಕರ್ತವ್ಯ ನಿರ್ವಹಿಸಿದ್ದೇನೆ. ದಿಃ 22-10-2014 ರಂದು ಮಾನ್ಯ ಈ ನ್ಯಾಯಾಲಯದಿಂದ ಹೊರಡಿಸಿದ ಈ ಪ್ರಕರಣದ ಆರೋಪಿ ಕಣ್ಣನ್ ಅಲಿಯಾಸ್ ಕಣ್ಣ ರವರ ವಿರುದ್ಧ ಉದ್ಘೋಷಣೆ ಮತ್ತು ಆಸ್ತಿ ಜಪ್ತಿ ಆದೇಶವನ್ನು ಹೊರಡಿಸಿದ್ದು, ಅದನ್ನು ಕಾರ್ಯಗತ ಗೊಳಿಸಲು ನಮ್ಮ ಮೇಲಾಧಿಕಾರಿಗಳು ನನಗೆ ತಿಳಿಸಿದರು. ಅದರಂತೆ ನಾನು ದಿಃ 22-10-2014 ರಂದು ಆರೋಪಿತನ ಊರಾದ ತಲಗಟ್ಟ ಪುರ ಪೊಲೀಸ್ ಠಾಣಾ ವ್ಯಾಪ್ತಿಯ ಅಂಜನಾಪುರ ಸರ್ಕಲ್ ಹತ್ತಿರ ಇರುವ ಆಂಜನೇಯ ದೇವಸ್ಥಾನದ ಹತ್ತಿರ ಇಬ್ಬರು ಪಂಚರನ್ನು ಕರೆಯಿಸಿ ಅವರ ಸಮಕ್ಷಮದಲ್ಲಿ ಉದ್ಘೋಷಣೆಯನ್ನು ಪಂಚನಾಮೆ ಮೂಲಕ ಸಾರ್ವಜನಿಕರನ್ನು ಸೇರಿಸಿಕೊಂಡು ಸದರಿ ಆರೋಪಿಯು ಮಾನ್ಯ ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದು ಆತನು ಎಲ್ಲಿಯಾದರೂ ಸಿಕ್ಕಿದಲ್ಲಿ ಅಥವಾ ಕಂಡಲ್ಲಿ ಹತ್ತಿರದ ಪೊಲೀಸ್ ಠಾಣೆಯಲ್ಲಿ ಅಥವಾ ಮಾನ್ಯ ಈ ನ್ಯಾಯಾಲಯಕ್ಕೆ ಹಾಜರುಪಡಿಸಬೇಕೆಂದು ಕೂಗಿಹಿ ಹೇಳಿರುತ್ತದೆ.

ಉದ್ಘೋಷಣೆಯ ಪ್ರತಿಯನ್ನು ಸಾರ್ವಜನಿಕರಿಗೆ ಕಾಣುವ ಹಾಗೆ ರಸ್ತೆಯ ಬದಿ ಇದ್ದ ಕಂಬಕ್ಕೆ ಅಂಟಿಸಿರುತ್ತದೆ. ಸದರಿ ಪಂಚನಾಮೆಯನ್ನು ಪಂಚರಾದ ಮನೋಹರ್ ಮತ್ತು ಶಿವಕುಮಾರ್ ರವರ ಸಮಕ್ಷಮ ಮದ್ಯಾಹ್ನ 3.00 ಗಂಟೆಯಿಂದ 4.15 ಗಂಟೆವರೆಗೆ ಜರುಗಿಸಿರುತ್ತದೆ. ಸದರಿ ಆರೋಪಿಯ ಚರ ಮತ್ತು ಸ್ಥಿರ ಆಸ್ತಿ ಬಗ್ಗೆ ಯಾವುದೇ ಮಾಹಿತಿ ಸಿಗಲಿಲ್ಲ. ನಾನು ಈಗ ಕಾರ್ಯ ಗತ ಗೊಳಿಸಿದ ಪಂಚನಾಮೆಯನ್ನು ನೋಡುತ್ತಿದ್ದು ಇದು ಅದೇ ಆಗಿರುತ್ತದೆ. ಇದರಲ್ಲಿ ನನ್ನ ಸಹಿ ಇದ್ದು ಇದು ನನ್ನ ಸಹಿ ಆಗಿರುತ್ತದೆ. ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು ಸಾಕ್ಷಿಯ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರವಾಗಿ ಇರುವುದಿಲ್ಲ

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.

ಓ ಹೇ ಕೇ ಸ ಇ ಒ

4 ನೇ ಅ ಮು ಮ ದಂ ನ್ಯಾ